


ಆದರೆ, ಒಂದು ವಿಚಿತ್ರ ರೀತಿಯ ಮುಗ್ಧತೆ ಅವನಲ್ಲಿತ್ತು. ಇಂತಹ ಮುಗ್ಧತೆಯನ್ನು ನಾನು ಅತಿ ಶ್ರೀಮಂತರಲ್ಲಿ ನೋಡಿದ್ದೆ. ಇತರರಿಗಿರುವ ಸವಲತ್ತು, ಹಣ, ಅಂತಸ್ತು ಎಲ್ಲವೂ ಸಾವಿರಾರು ಪಟ್ಟು ಹೆಚ್ಚಿರುವ ಇಂತಹವರಿಗೆ ಇತರರನ್ನು ಮೀರಿಸುವ, ಹಿಂದಿಕ್ಕುವ, ಈರ್ಷ್ಯೆಪಡುವ ಅಗತ್ಯ ಇರುವುದಿಲ್ಲ. ತಮ್ಮ ಸುತ್ತ ಇರುವ ಜನರಿಗಿರಬಹುದಾದ ಸಾಮಾನ್ಯ ಕಷ್ಟಗಳ ಅರಿವೂ ಅವರಿಗಿರುವುದಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಅಬ್ದುಲ್ ಅಜೀಜ್‌ಗೆ ದುಡಿಯುವ, ಕಲಿಯುವ, ಕೆಲಸ ಮಾಡುವ ಅಗತ್ಯವೂ ಇರಲಿಲ್ಲ. ಆದರೂ ಯಾಕೆ ನಮ್ಮೊಂದಿಗಿದ್ದಾನೆ? ಎಂದು ಹಲವೊಮ್ಮೆ ಕೇಳಿಕೊಂಡಿದ್ದೆ. ಹಾಗಾಗಿ ಇನ್ನೂ ಕುತೂಹಲ ಹೆಚ್ಚಿತು.

ತನ್ನ ಸರದಿ ಬರುತ್ತಲೇ ಅವನು ಗಂಭೀರವಾದ. "ಮೈ ಫಾದರ್ ಪನಿಶ್ಡ್ ಮೈ ಮದರ್" ಎಂದ.

"ಏನು?'' ಎಂದೆ.

"ಅವನು ನನ್ನ ತಾಯಿಯನ್ನು ಕೊಂದ'' ಎಂದ.

ನನ್ನ ಕೈಯಲ್ಲಿದ್ದ ಸೂಪ್‌ನ ಚಮಚ ಜಾರಿ ಬಿತ್ತು!

"ಯಾಕೆ?'' ಅಂತ ಒಮ್ಮೆಲೆ ನಾಲ್ವರಾದರೂ ಕೇಳಿದ್ದೆವು.

"ಆಕೆ ತಪ್ಪು ಮಾಡಿದ್ದಳಂತೆ'' ಎಂದ.